# ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

## ಸತ್ರ ಪ್ರಕರಣ ಸಂಖ್ಯೆಃ 5058/2025

ಪ್ರಾ ಸಾ 5 ಚಾ ಸಾ 5

ಹೆಸರುಃ ಚಂದ್ರುಶೇಖರ

ತಂದೆಯ ಹೆಸರುಃ ಕ್ಯಾತೇಗೌಡ

ವಯಸ್ಸುಃ 58 ವರ್ಷ

ಉದ್ಯೋಗಃ ವ್ಯವಸಾಯ

ವಾಸಃ ಮೇನಾಗರ

**ದಿಃ 04.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯ್ತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. ನನಗೆ ಚಾಸ 1 ಗೊತ್ತು. ಅವರು ಮೇನಗರದ ಆಕೆಯ ತಂದೆಯ ಮನೆಯಲ್ಲಿ ವಾಸ ಇದ್ದಾರೆ . ಆಕೆಯ ಗಂಡನ ಮನೆ ಲಕ್ಷ್ಮಿಸಾಗರ . ಗಂಡನ ಕಡೆ ಸ್ವಂತ ಮನೆ ಇದೆಯಾ ಎಂದು ಗೊತ್ತಿಲ್ಲ. ಆಕೆ ಯಾವ ಕಾರಣಕ್ಕೆ ಅಮ್ಮನ ಮನೆಯಲ್ಲಿ ಇದ್ದಾರೆ ಎಂದು ಗೊತ್ತಿಲ್ಲ.

2. ನ್ಯಾಯಾಲಯದ ಮುಂದಿರುವ ಆರೋಪಿ ಗೊತ್ತು. ಆತನ ಹೆಸರು ಪ್ರತೀಪ.

3. 2025 ನೇ ಇಸವಿಯಲ್ಲಿ ಪೊಲೀಸರು ಸ್ಟೇಷನ್ ಗೆ ಕರೆದು ನನ್ನ ಸಹಿ ಪಡೆದಿದ್ದರು .

4. ಈ ಪ್ರಕರಣದ ಆರೊಪಿತರ ವಿರುದ್ದ ಯಾರು ದೂರು ನೀಡಿ ಪ್ರಕರಣ ದಾಖಲಾಗಿದೆ ಎಂದು ಗೊತ್ತಿಲ್ಲ. ಆರೋಪಿತನ ವಿರುದ್ದದ ಈ ಪ್ರಕರಣದಲ್ಲಿ ಪೊಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿಲ್ಲ.

(ಈ ಸಾಕ್ಷಿಯು ತನ್ನ ಹೇಳಿಕೆಗೆ ವಿರುದ್ಧವಾದ ಸಾಕ್ಷ್ಯವನ್ನು ನುಡಿದಿರುವುದರಿಂದ ಅಭಿಯೋಜಕರ ಕೋರಿಕೆಯಂತೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಿದೆ.)

<u>ಪಾಟೀ ಸವಾಲುಃ ಮಾನ್ಯ ಅಭಿಯೋಜಕರಿಂದಃ</u>

5. 6.6.25 ರಂದು ಸಂಜೆ 4 ಗಂಟೆಯಲ್ಲಿ ನಾನು ಮನೆಯಲ್ಲಿ ಇದ್ದಾಗ ಚಾಸಾ5 ರವರು ನನಗೆ ಕರೆ ಮಾಡಿ ಈ ಪ್ರಕರಣದಲ್ಲಿ ತಿಳಿಸಲಾದ ಘಟನೆ ಬಗ್ಗೆ ಮಾಹಿತಿ ನೀಡಿದ್ದರು

ಎಂದರೆ ಸರಿಯಲ್ಲ.

6. ಅವರು ನಮ್ಮ ಗ್ರಾಮದವರೇ ಆದ ಚಾಸಾ1ರವರು ಬೊರಾಪುರ ಗ್ರಾಮುಕ್ಕೆ ಹೊಂದಿಕೊಂಡಂತೆ ಇರುವ ಹೇಮಾವತಿ ಉಪಕಾಲುವೆಯ ಮೇಲೆ ಒಬ್ಬ ವ್ಯಕ್ತಿಯು ಮಹಿಳೆಯೊಬ್ಬಳಿಗೆ ಪೆಟ್ಟು ತಿಂದು ಬಿದಿಐರುವುದಾಗಿ ಫೋನ್ ಮೂಲಕ ತಿಳಿಸಿದರು ಎಂದರೆ ಸರಿಯಲ್ಲ. ವಿಚಾರ ತಿಳಿದು ನಾನು ಚಾಸಾ5 ರವರು ಸ್ಥಳಕ್ಕೆ ಹೋಗಿ ನೋಡಿದಾಗ ಅಲ್ಲಿ ಆಂಬುಲೆನ್ಸ್ ಬಂದು ನಿಂತಿದ್ದು ಅಲ್ಲಿ ಚಾಸಾ1ರವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದರೆ ಸರಿಯಲ್ಲ.

7. ನಾನು ಮತ್ತು ಚಾಸಾ5ರವರು ಅಲ್ಲೇ ಇದ್ದ ಚಾಸಾ1ರವರನ್ನು ವಿಚಾರಿಸಿದಾಗ ಅವಳು ಈ ಪ್ರಕರಣದ ದೂರುದಾರಳಾದ ಲತಾ ಆಗಿದ್ದು ಅವರು ಲಕ್ಷ್ಮಿಸಾಗರದ ಗ್ರಾಮದವರಾಗಿದ್ದು ಆರೋಪಿ ಗೆ ಆ ಹಿಂದೆ 2 ಲಕ್ಷ 50 ಸಾವಿರ ರೂ.ಗಳನ್ನು ಸಾಲವಾಗಿ ನೀಡಿದ್ದು ಅದನ್ನು ಹಿಂದಿರುಗಿಸುವಂತೆ ಕೇಳಿಕೊಂಡಾಗ ಆರೋಪಿಯು ಹಣ ಕೊಡುತ್ತೇನೆ ಎಂದು ಹೇಳಿ ಜಕ್ಕನಹಳ್ಳಿ ಹೋಗಲೆಂದು

ನರಹಳ್ಳಿ ಬಸ್ ನಿಲ್ದಾಣದ ಬಳಿ ಇದ್ದ ಅವರನ್ನು ಆಟೋದಲ್ಲಿ ಕೂರಿಸಿಕೊಂಡು ಈ ಸ್ಥಳದಲ್ಲಿ ಕರೆದುಕೊಂಡು ಬಂದು ಅಲ್ಲಿ ನಿರ್ಜನ ಪ್ರದೇಶವಾದ್ದರಿಂದ ಆಟೋದಿಂದ ಕೆಳಕ್ಕೆ ಕರೆದು ಕಾಲಿನಿಂದ ತುಳಿದು , ಕಬ್ಬಿಣದ ರಾಡಿನಿಂದ ತಲೆಗೆ ಹೊಡೆದು ಕುತ್ತಿಗೆ ಹಿಸುಕಿ ಕೊಲೆ ಮಾಡಲು ಪ್ರಯತ್ನಿಸುತ್ತಿದ್ದ ಮುಂದುವರೆದು ಕಾಲುಗಳನ್ನು ಹಗ್ಗದಿಂದ ಕಟ್ಟುತ್ತಿರುವಾಗ ಚಾಸಾ2 ಮತ್ತು ಚಾಸಾ3 ರವರು ಸ್ಥಳಕ್ಕೆ ಬಂದಿದ್ದರು ಎಂದು ತಿಳಿಸಿದ್ದಳು ಎಂದರೆ ಸರಿಯಲ್ಲ.

8. ದಿಃ 8.6.2025 ರಂದು ವಿಚಾರ ಮಾಡಲಾಗಿ ಪೊಲೀಸರು ಮೇಲೆ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ9 ಎಂದು ಗುರುತಿಸಲಾಯಿತು.

9.ನಿಪಿ 9 ರಲ್ಲಿ ತಿಳಿಸಲಾದಂತೆ ಘಟನೆ ನಡೆದಿರುವ ಬಗ್ಗೆ ಗೊತ್ತಿದ್ದರೂ ಆರೋಪಿಯ ಕೋರಿಕೆಯ ಮೇರೆಗೆ ಸುಳ್ಳು ಸಾಕ್ಷ್ಯವನ್ನು ನುಡಿದಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿಗಳ ಪರವಾಗಿ ಃ</u>
<u>ಶ್ರೀ ಸಿ ಎಂ ಎಸ್ ವಕೀಲರಿಂದಃ</u>

ಇರುವುದಿಲ್ಲ.

ಮರು ವಿಚಾರಣೆ ಃ ಇಲ್ಲ .

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)